10 ಅಧ್ಯಕ್ಷರ ಅಪ್ಪಣೆ ಮೇರೆಗೆ

(ಅ) ಕೊಡಗು ಜಿಲ್ಲೆಯ ಜುಮ್ಮಾ, ಬಾಣೆ ಮತ್ತು ಉಂಬಳಿ ಬಗ್ಗೆ ಪ್ರಸ್ತಾಪ :

ಶ್ರೀ ಕೆ.ಜಿ. ಬೋಪಯ್ಯ (ಮಡಿಕೇರಿ) :– ಮಾನ್ಯ ಅಧ್ಯಕ್ಷರೆ ಇವತ್ತು ಕೊಡಗು ಜಿಲ್ಲೆಯು ಹಲವಾರು ರೀತಿಯಿಂದ ತನ್ನದೇ ಆದ ಸಂಸ್ಕೃತಿಯನ್ನು ಉಳಿಸಿಕೊಂಡು ಬಂದಂಥ ಒಂದು ಪುಟ್ಟ ಜಿಲ್ಲೆಯಾಗಿದೆ. ಇದು ತನ್ನದೇ ಆದ ಸಮಸ್ಯೆಗಳನ್ನು ಎದುರಿಸುತ್ತಿದೆ. ಕೊಡಗು ಜಿಲ್ಲೆ ಮೊದಲು ಪ್ರತ್ಯೇಕವಾದ ರಾಜ್ಯವಾಗಿದ್ದಾಗ ಬ್ರಿಟಿಷರು ಅಲ್ಲಿಯ ಭೂಮಿಗೆ ಸಂಬಂಧಪಟ್ಟ ಹಾಗೆ ಅನೇಕ ಕಾನೂನುಗಳನ್ನು ಮಾಡಿದ್ದರು. ಅಲ್ಲಿ ಎಲ್ಲಾ ರೀತಿಯಲ್ಲಿ ಪ್ರತ್ಯೇಕವಾದ ಕಾನೂನುಗಳು ಇತ್ತು. ಆದರೆ 1956 ನೇ ಇಸವಿಯಲ್ಲಿ ಕೊಡಗು ಕರ್ನಾಟಕದೊಟ್ಟಿಗೆ ಮರ್ಜ್ ಆಯಿತೋ, ಆ ಒಂದು ಹಿನ್ನೆಲೆಯಲ್ಲಿ ಕೊಡಗಿನಲ್ಲಿರುವಂತಹ ಎಲ್ಲಾ ಕಾನೂನುಗಳನ್ನು ಕೂಡ ರಿಪೀಲ್ ಆಗಿದ್ದರೂ ಕೂಡ ಇವತ್ತು ಅಧಿಕಾರಿಗಳು ಯಾವುದೋ ಒಂದು ಉದ್ದೇಶದಿಂದ ಕೊಡಗು ಜಿಲ್ಲೆಗೆ ಸತತವಾಗಿ ಒಂದು ರೀತಿಯ ತೊಂದರೆಗಳನ್ನು ಕೊಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಇದರಲ್ಲಿ ಮುಖ್ಯವಾಗಿರುವಂತಹದ್ದು ಕೊಡಗಿನಲ್ಲಿರುವಂತಹ ಜುಮ್ಮಾ ಮತ್ತು ಬಾಣೆ, ಕೊಡಗಿನಲ್ಲಿ ಬೇರೆ ಬೇರೆ ರೀತಿಯ ಜುಮ್ಮಾ ಮತ್ತು ಬಾಳೆ, ಉಂಬಳಿ ಈ ರೀತಿಯ ಬಟ್ಟಮಾನೆ ಎಂದು ಹೇಳಿ 32 ಟೆನ್ಯೂರ್‌ಗಳು ಇದೆ.

ಕೊಡಗಿನ ಜನರು ಬಹುಶಃ ಯಾವ ವರ್ಷದಿಂದ ಈ ಜಮೀನನ್ನು ಅನುಭವಿಸಿಕೊಂಡು ಬರುತ್ತಿದ್ದರು ಎಂಬುದಕ್ಕೆ ಏನೂ ಆಧಾರವೇ ಇಲ್ಲ. ಕೊಡಗನ್ನು ಆಡಳಿತ ಮಾಡುತ್ತಿರುವಂತಹ ರಾಜರ ಕಾಲದಲ್ಲಿಯೂ ಕೂಡ ಇದರ ಬಗ್ಗೆ ಸ್ಪಷ್ಟವಾಗಿ ಅಂದಿನ ರಾಜರ ಶಾಸನದಲ್ಲಿ ಹೇಳಿದ್ದಾರೆ. ಇದನ್ನು ವಂಶಪಾರಂಪರ್ಯವಾಗಿ ಸೂರ್ಯ ಮತ್ತು ಚಂದ್ರ ಇರುವವರೆಗೂ ಕೂಡ ಅನುಭವಿಸಿಕೊಂಡು ಹೋಗುತ್ತಾ ಇರುವುದರ ಬಗ್ಗೆ ಹೇಳುವಂಥದ್ದು ರಾಜರ ಶಾಸನದಲ್ಲಿದ್ದರೂ ಕೂಡ ಇವತ್ತು ಕಂದಾಯ ಇಲಾಖೆಯ ಅಧಿಕಾರಿಗಳು ಈ ಆಸ್ತಿಯ ಮೇಲೆ ನಿಮಗೆ ಲಿಮಿಟೆಡ್ ಹಕ್ಕು ಇದೆ, ಇದು ಸರ್ಕಾರದ ಸ್ವತ್ತು ಎನ್ನುವಂತಹ ರೀತಿಯಲ್ಲಿ ಆದೇಶವನ್ನು ಹೊರಡಿಸುವಂತಹದ್ದನ್ನು ನಾವು ನೋಡುತ್ತಿದ್ದೇವೆ. ಈ ವಿಚಾರ ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದ ಮುಂದೆ 1993 ನೇ ಇಸವಿಯಲ್ಲಿ ಬಂದಾಗ ಇದಕ್ಕೆ ಸ್ಪಷ್ಟವಾದ ನಿರ್ದೇಶನ ಕೂಡ ದೊರಕಿತ್ತು. ಕೊಡಗಿನ ಜಮ್ಮಾ ಮತ್ತು ಬಾಣೆಗಳಲ್ಲಿ ಎರಡು options ಗಳನ್ನು ಅಲ್ಲಿಯ ಮಾಲೀಕರುಗಳಿಗೆ ಕೊಟ್ಟರು.

ಹಿಂದೆ ಏನಿತ್ತು, ಬ್ರಿಟಿಷರ ಕಾಲದಲ್ಲಿ Coorg Land Revenue Regulation ಪ್ರಕಾರ ಜಮ್ಮಾ ಮತ್ತು ವರ್ಗ ಏನು ವೆಟ್ ಲ್ಯಾಂಡ್ ಇತ್ತೋ ಅದಕ್ಕೆ ಅಟ್ಯಾಚ್ ಆಗಿ ಈ ಬಾಣೆ ಲ್ಯಾಂಡ್‌ಗಳು ಇದ್ದವು. ಆ ಬಾಣೆ ಲ್ಯಾಂಡ್‌ಗಳಿಗೆ ಕಂದಾಯ ಇರಲಿಲ್ಲ. ಅಂದಿನ ಕಾಲದಲ್ಲಿ ಏನಿತ್ತು, ಯಾರಾದರೂ ಇಷ್ಟಪಟ್ಟರೆ ಆ Coorg Land Revenue Regulation 136 ರ ಪ್ರಕಾರ ಅರ್ಜಿಯನ್ನು ಕೊಟ್ಟರೆ ಆ ವರ್ಗಕ್ಕೆ ಅಟ್ಯಾಚ್ ಆದಂತಹ ಬಾಣೆ ಜಾಗವನ್ನು ಕೃಷಿ ಮಾಡುವುದಕ್ಕೆ ಅವಕಾಶವನ್ನು ಕೊಡುತ್ತಿದ್ದರು. 50 ರೂಪಾಯಿಗಳ ಕಂದಾಯವನ್ನು ಹಾಕಿ ಆ ಒಂದು ವರ್ಗಕ್ಕೆ ಜಮೀನು ಏನಿತ್ತು ಅದನ್ನು ಸ್ವಂತಕ್ಕೆ ಕೃಷಿ ಮಾಡಿ ಅಲ್ಲಿಂದ ಅದಕ್ಕೆ ಪೂರ್ಣ ಮಾಲೀಕತ್ವವನ್ನು ಕೊಡುವಂತಹ ಒಂದು ವ್ಯವಸ್ಥೆ ಇತ್ತು.

ಇದನ್ನು ಪರಿಗಣಿಸಿ ಬಹುಶಃ 1981 ನೇ ಇಸವಿಯಲ್ಲಿ ಕಂದಾಯ ಇಲಾಖೆಯಿಂದ ಒಂದು ಆದೇಶವನ್ನು ಹೊರಡಿಸಿದರು. ಎಲ್ಲಾ ಬಾಣೆ ಜಾಗಗಳು ಸರ್ಕಾರದ ಸ್ವತ್ತು ಇದರ ಬಗ್ಗೆ ನಿಮಗೆ ಯಾವುದೇ ಹಕ್ಕು ಇಲ್ಲವೆಂಬ ಬಗ್ಗೆ ಒಂದು ಆದೇಶ ಬಂದಾಗ ಅದನ್ನು ಕೊಡಗಿನ ಚಕ್ಕೇರಾ ಪೂವಯ್ಯನವರು ಕೋರ್ಟ್‌ನಲ್ಲಿ ಚಾಲೆಂಜ್ ಮಾಡಿದಾಗ 1993 ನೇ ಇಸವಿಯಲ್ಲಿ ಇದಕ್ಕೆ ಸ್ಪಷ್ಟವಾದ ಪೂರ್ಣ ಪ್ರಮಾಣದ ಫುಲ್ ಬೆಂಚಿನಲ್ಲಿ ಜಡ್ಜ್‌ಮೆಂಟ್‌ನ್ನು ಕೊಟ್ಟಿದೆ. ಆ ಜಡ್ಜ್‌ಮೆಂಟ್‌ನ ಆಧಾರದಲ್ಲಿ ಎರಡು option ಗಳನ್ನು ಬಹಳ ಸ್ಪಷ್ಟವಾಗಿ ಕೊಟ್ಟಿದೆ. ಅದರಲ್ಲಿ ಬಹಳ ಸ್ಪಷ್ಟವಾಗಿ ಹೇಳಿರುವಂತಹದ್ದು ಇವತ್ತು ಏನು ಕೊಡಗಿನಲ್ಲಿ ಹಿಂದೆ ಇದ್ದಂತಹ Coorg Land Regulation ಅದು Karnataka Land Revenue Act ಬಂದ ನಂತರ ಅದು repeal ಆಗಿದೆ. ಇವತ್ತು ಕೊಡಗಿನ ಎಲ್ಲಾ ಜಮೀನುಗಳಿಗೆ Karnataka Land Revenue Act ಅನ್ನು ಅಪ್ಲೈಮಾಡಿ ಅದರ ಪ್ರಕಾರ ಏನು ಬರುತ್ತದೆ ಅದನ್ನು ಅನುಭವಿಸಿಕೊಂಡು ಹೋಗುವಂತಹ ಒಂದು ಹಕ್ಕನ್ನು ಕೊಟ್ಟಿದ್ದಾರೆ.

Alienated bane ಅಥವಾ Jamma alienated or non-alienated, privileged or unprivileged ಅನ್ನುವಂತಹದ್ದನ್ನು ಬಹಳ ಸ್ಪಷ್ಟವಾಗಿ ಹೇಳಿ ಅದರ ಬಗ್ಗೆ ಮಾಲೀಕತ್ವದ ಹಕ್ಕನ್ನು ಕೊಟ್ಟಿದ್ದಾರೆ. ಇಲ್ಲಿ ಆ ಬಗ್ಗೆ ಸ್ಪಷ್ಟವಾಗಿ ಉಲ್ಲೇಖ ಮಾಡಿದ್ದಾರೆ. ಇವತ್ತು ಜಮ್ಮಾ ಮತ್ತು ಬಾಣೆಗಳು ಏನಿದೆ, ಅದನ್ನು ನೀವು ಹಾಗೆಯೇ ಉಪಯೋಗಿಸಿದರೆ, ಹಿಂದಿನ Coorg Land Revenue Regulation ನಲ್ಲಿ ಏನಿದೆ,

ಅದರಲ್ಲಿ ನೀವು ಸ್ವಲ್ಪ ಗದ್ದೆಗಳಿಗೆ ತೆಗೆಯುವಂತಹದ್ದು ಸ್ವಂತ ಉಪಯೋಗಕ್ಕೆ ಮರ-ಮುಟ್ಟುಗಳನ್ನು ತೆಗೆಯುವಂತಹದ್ದು ಮಾತ್ರ ಉಪಯೋಗ ಮಾಡುವಂತಹದ್ದು. ಆದರೆ ಅದರಲ್ಲಿ ಏನಾದರೂ ಕೃಷಿಯನ್ನು ಮಾಡುವುದಾದರೆ ಒಂದೇ ಒಂದು ಅವಕಾಶ ಎಂದರೆ ನೀವು ಸರ್ಕಾರಕ್ಕೆ ಕಂದಾಯವನ್ನು ಕೊಡಬೇಕು. ಅದರಲ್ಲಿ ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ನ್ಯಾಯಾಲಯವು ಸ್ಪಷ್ಟವಾದ ಆದೇಶವನ್ನು ಕೊಟ್ಟಿದೆ. ಸರ್ಕಾರ ಇದರ ಬಗ್ಗೆ ಕ್ರಮವನ್ನು ಕೈಗೊಳ್ಳಬೇಕು. ಯಾರು ಈ ಜಮ್ಮಾ ಮಾಲೀಕರು ಇದ್ದಾರೆ ಅವರಿಗೆ ಸ್ಪಷ್ಟವಾದ ನಿರ್ದೇಶನವನ್ನು ಕೊಡಬೇಕಾಗುತ್ತದೆ.

ಆ ನಿರ್ದೇಶನದ ಪ್ರಕಾರ ಯಾರ್ಯಾರು ಕೃಷಿಯನ್ನು ಮಾಡುತ್ತಾರೆ, ಅವರೆಲ್ಲರಿಗೂ ಕಂದಾಯವನ್ನು ನಿಗದಿಪಡಿಸಬೇಕು ಹಾಗೂ ಮಾಲೀಕತ್ವವನ್ನು ಕೊಡಬೇಕೆಂದು ಒಂದು ಆದೇಶವನ್ನು ಕೊಟ್ಟಿದೆ. ಅದರ ಆಧಾರದ ಮೇಲೆ ಕರ್ನಾಟಕದ ಅಂದಿನ ಸರ್ಕಾರ 22-08-1997 ನೇ ಇಸವಿಯಲ್ಲಿ ಸರ್ಕಾರದ ಕ್ಯಾಬಿನೆಟ್‌ನಲ್ಲಿ ಒಂದು ತೀರ್ಮಾನವನ್ನು ಮಾಡಿದರು. ಆ ತೀರ್ಮಾನದಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. For giving complete rights over the privileged lands including unauthorised occupants, they will have to be governed by the provisions of the Karnataka Land Revenue Act and Rules ಎಂದು ಹೇಳಿ ಆ ಒಂದು ಕ್ಯಾಬಿನೆಟ್ ತೀರ್ಮಾನದ ಆಧಾರದ ಮೇಲೆ ಅಂದಿನ ಜಿಲ್ಲಾಧಿಕಾರಿಗಳು ಕೊಡಗಿನಲ್ಲಿ ಯಾರು ಇದ್ದರು, ಅವರಿಂದ ವರದಿಯನ್ನು ತರಿಸಿಕೊಂಡು, ಅದರ ಆಧಾರದ ಮೇಲೆ ಅದಕ್ಕೆ ಒಂದು ವಿಶೇಷವಾದ ಕಮಿಟಿಯನ್ನು ಮಾಡಿ ಕ್ಯಾಬಿನೆಟ್ ತೀರ್ಮಾನದ ಆಧಾರದ ಮೇಲೆ ಅವರಿಗೆ ಮಾಲೀಕತ್ವವನ್ನು ಕೊಡಬೇಕು ಮತ್ತು ಎಲ್ಲಾ ಬಾಣೆ ಲ್ಯಾಂಡ್‌ಗಳನ್ನು ಕಂದಾಯಕ್ಕೆ ತರಬೇಕೆಂಬ ಬಗ್ಗೆ ಒಂದು ಸ್ಪಷ್ಟವಾದ ಆದೇಶವನ್ನು ಅಂದಿನ Revenue Commissioner ರವರು 22-09-1999 ನೇ ಇಸವಿಯಲ್ಲಿ ಕ್ಯಾಬಿನೆಟ್ ತೀರ್ಮಾನದ ಆಧಾರದ ಮೇಲೆ ಕೊಟ್ಟಿದ್ದರೂ ಕೂಡ ಇವತ್ತಿನ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಹೊರಡಿಸಿರುವ ಸುತ್ತೋಲೆಯಿಂದ ಬಹುಶಃ ನಮಗೆಲ್ಲರಿಗೂ ನೋವಾಗುತ್ತಿದೆ.

ಬಹುಶಃ ಈ ಒಂದು ಆಧಾರದ ಮೇಲೆ ಅನೇಕ ಆದೇಶಗಳೆಲ್ಲವೂ ಕೊಡಗಿನ ಜಮ್ಮಾ ಮತ್ತು ಬಾಣೆ ಮಾಲೀಕರ ಪರವಾಗಿ ಕೊಟ್ಟಿದ್ದರೂ ಕೂಡ ಇವತ್ತು ಈ ಒಂದು ಸಮಸ್ಯೆ ಬಹುಶಃ ಹಿಂದಿನ ಸರ್ಕಾರವಿದ್ದಾಗ 22-08-1997 ರಲ್ಲಿ ಆದ ಒಂದು ಕ್ಯಾಬಿನೆಟ್ ತೀರ್ಮಾನವನ್ನು ಮತ್ತೆ ಮುಂದುವರಿಸಬೇಕೆಂದು ಹೇಳಿ ಸನ್ಮಾನ್ಯ

ಧರ್ಮಸಿಂಗ್‌ರವರು ಮುಖ್ಯಮಂತ್ರಿಯಾಗಿದ್ದಾಗ ಎಂ.ಪಿ. ಪ್ರಕಾಶ್‌ರವರು ಕಂದಾಯ ಮಂತ್ರಿಗಳಾಗಿದ್ದರು. ಅನೇಕ ಬಾರಿ ಸ್ಪಷ್ಟವಾಗಿ ಹೇಳಿದ್ದಾರೆ. ಆಗ ಇದೇ ವಿಧಾನಸಭೆಯಲ್ಲಿ ಸನ್ಮಾನ್ಯ ಜೀವಿಜಯರವರು ಈ ಬಗ್ಗೆ ಪ್ರಸ್ತಾಪ ಮಾಡಿದಾಗ ಈ ಸದನದಲ್ಲಿ ಈ ಬಗ್ಗೆ ಸ್ಪಷ್ಟವಾಗಿ ಹೇಳಿದ್ದಾರೆ. ಅದರಲ್ಲಿ ಅವರು ಆಶ್ವಾಸನೆಯನ್ನು ಕೂಡ ಕೊಟ್ಟಿದ್ದಾರೆ. ಬಹುಶಃ ಆ ಒಂದು ಆಶ್ವಾಸನೆ ಈ ರೀತಿ ಇದೆ. ಇವತ್ತು ಕೊಡಗಿನ ಬಗ್ಗೆ ಪ್ರಸ್ತಾಪ ಮಾಡಿರುವಂತೆ ಭೂ ಕಂದಾಯ ಹಾಗೂ ಇತರ ಕರ್ನಾಟಕಕ್ಕೆ ಅನ್ವಯ ಆಗುವಂತೆ ಮಾಡಬೇಕು.

ಕೊಡಗಿಗೆ ಒಂದು ಕಾನೂನು ಅಥವಾ ಬೇರೆ ರಾಜಕ್ಕೆ ಒಂದು ಕಾನೂನು ಎಂಬುದು ಇದು ಸರಿಯಾದ ಕ್ರಮವಲ್ಲ, ಮುಂದೆ ಇದನ್ನು ಸರಿಪಡಿಸುತ್ತೇವೆ. ಇನ್ನು ಒಂದು ವಾರದೊಳಗೆ ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಇದಕ್ಕೆ ಅಂತಿಮ ತೀರ್ಮಾನವನ್ನು ಕೊಟ್ಟು ಆ ತೀರ್ಮಾನದ ಪ್ರತಿಯನ್ನು ನಿಮಗೆ ತಕ್ಷಣ ಕಳುಹಿಸಿಕೊಡುತ್ತೇವೆಂದು ಅಂದಿನ ಕಂದಾಯ ಸಚಿವರು ಇದೇ ಸದನದಲ್ಲಿ ಆಶ್ವಾಸನೆಯನ್ನು ಕೊಟ್ಟಿದ್ದರು. ಆದರೆ ಆಶ್ವಾಸನೆಯೂ ಆಶ್ವಾಸನೆಯಾಗಿಯೇ ಉಳಿಯಿತು, ಇವತ್ತಿನವರೆಗೆ ಅದನ್ನು ಕಾರ್ಯಗತ ಮಾಡುವ ಬಗ್ಗೆ ರಾಜಕೀಯ ಇಚ್ಛಾಶಕ್ತಿಯನ್ನು ಇವತ್ತು ವ್ಯಕ್ತಪಡಿಸದೇ ಇರುವುದರಿಂದ ಇವತ್ತು ಇಡೀ ಜಿಲ್ಲೆಯಲ್ಲಿ ಒಂದು ರೀತಿಯ ಅಸಮಾಧಾನವಾಗಿದೆ. ಇಷ್ಟೆಲ್ಲಾ ಆಗಿದ್ದರೂ ಕೂಡ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು ಏನು ಅದೇಶವನ್ನು ಹೊರಡಿಸಿದ್ದಾರೆಂದರೆ, ಇದು ಬಹಳ ನೋವಾಗುವಂತಹ ವಿಷಯವಾಗಿದೆ.

ಇವತ್ತು ಕೊಡಗು ಎಂದರೆ ಯಾವ ರೀತಿಯಲ್ಲಿ ಮಳೆ ಹೊಡೆಯಬೇಕು, ಕಾವೇರಿ ಹೊಳೆ ತುಂಬಬೇಕು, ಅದರ ಮುಖಾಂತರ ಕೆ.ಆರ್.ಎಸ್. ತುಂಬಬೇಕು, ಕಬಿನಿ ಮತ್ತು ಹಾರಂಗಿ ಜಲಾಶಯಗಳು ತುಂಬಬೇಕು, ನಮಗೆಲ್ಲರಿಗೂ ನೀರು ಬೇಕು. ಆದರೆ ಕೊಡಗಿನ ಸಮಸ್ಯೆಗಳ ಬಗ್ಗೆ ಯಾರೂ ಕೂಡ ಚಿಂತನೆಯನ್ನು ಮಾಡುವುದಿಲ್ಲ. ಕೊಡಗು ಎಂದರೆ ನಿಮಗೆ ಮಳೆ ಹೊಡೆದು ನೀರು ಬೇಕು. ನೀರು ಬಿಟ್ಟರೆ ನಮಗೆ ಏನು ಬೇಡ, ಈ ರೀತಿಯ ಒಂದು ಭಾವನೆಯಿಂದ ಕೊಡಗು ಜಿಲ್ಲೆಯವರು ನಾವು ಪ್ರತ್ಯೇಕವಾಗಿರುತ್ತೇವೆನ್ನುವಂತಹ ಭಾವನೆ ಇವತ್ತು ಇಡೀ ಜಿಲ್ಲೆಯಲ್ಲಿ ಆಗುತ್ತಿದೆ. ಅಲ್ಲಲ್ಲಿ ಪ್ರತಿಭಟನೆಗಳು ಆಗುತ್ತಿದೆ. ಬಹುಶಃ ಈ ಒಂದು ಉದ್ದೇಶದಿಂದ ಈ ಒಂದು ಸಮಸ್ಯೆಯನ್ನು ಇತ್ಯರ್ಥ ಮಾಡಬೇಕೆಂಬುದರ ಬಗ್ಗೆ ಅಕ್ಟೋಬರ್ 6 ರಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ಒಂದು ಸಭೆಯನ್ನು ಕರೆದರು.

12–10–2006 ರಂದು ಸಭೆಯನ್ನು ಕರೆದು ಆ ಒಂದು ಸಭೆಯಲ್ಲಿ ನಮ್ಮ ಎಲ್ಲಾ ಚುನಾಯಿತ ಪ್ರತಿನಿಧಿಗಳು, ಮಾಜಿ ಶಾಸಕರು, ಮಂತ್ರಿಗಳು, ಕಂದಾಯ ಮಂತ್ರಿಗಳು ಎಲ್ಲರೂ ಸೇರಿ ಒಂದು ಸಭೆಯನ್ನು ಮಾಡಿ ಇದನ್ನು ಒಂದು ರಾಜಕೀಯ ಇಚ್ಛಾಶಕ್ತಿಯೊಂದಿಗೆ ಕೊಡಗಿನ ಸಮಸ್ಯೆಯನ್ನು ಇತ್ಯರ್ಥ ಮಾಡಬೇಕು, ಇದನ್ನು ಸಚಿವ ಸಂಪುಟದಲ್ಲಿ ತಂದು ಇದಕ್ಕೆ ಶಾಶ್ವತವಾದ ಪರಿಹಾರವನ್ನು ಕೊಡಬೇಕೆಂದು ತೀರ್ಮಾನವನ್ನು ಮಾಡಿದರೆ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಒಂದು ಆದೇಶವನ್ನು ಹೊರಡಿಸುತ್ತಾರೆ. 31–10–2006 ರಂದು ಹಿಂದಿನ ಎಲ್ಲಾ ಸಚಿವ ಸಂಪುಟದ ತೀರ್ಮಾನಕ್ಕೆ ವಿರುದ್ಧವಾಗಿ ಒಂದು ಆದೇಶವನ್ನು ಹೊರಡಿಸುತ್ತಾರೆ.

ಶ್ರೀ ಎ.ಟಿ. ರಾಮಸ್ವಾಮಿ :– ಇನ್ನೂ ಕೆಲವು ವಿಚಾರಗಳು ಇವೆ.

ಅಧ್ಯಕ್ಷರು :– ಮಾನ್ಯ ಸಚಿವರು ಈ ಬಗ್ಗೆ ಉತ್ತರವನ್ನು ಕೊಡುತ್ತಾರೆ.

ಶ್ರೀ ಕೆ.ಜಿ. ಬೋಪಯ್ಯ :– ಇದು ಹಾಗಲ್ಲ. ನಾನು ಒಂದು ಬೇಡಿಕೆಯನ್ನು ಇಟ್ಟುಬಿಡುತ್ತೇನೆ. ಅವರು ಒಂದು ಸುತ್ತೋಲೆಯನ್ನು ಕೊಟ್ಟಿದ್ದಾರೆ. ಅದರ ದಿನಾಂಕ 31–102006 **ವಿಷಯ :–** ಬಾಣೆ ಜಮೀನುಗಳಲ್ಲಿ ಸರ್ಕಾರದ ಹಕ್ಕನ್ನು ಉಳಿಸಿಕೊಳ್ಳುವ ಹಾಗೂ ಅದರ ಪರಿವರ್ತನೆಗಳಿಗೆ ಅವಕಾಶವನ್ನು ನೀಡದಿರುವ ಬಗ್ಗೆ ಎಂದು ಹೇಳಿ. High Court judgment ನ್ನು ಕೋಟ್ ಮಾಡಿ ಅವರು ಹೇಳುತ್ತಾರೆ. ಬಾಣೆ ಜಮೀನುಗಳ ಒಡೆತನದ ಬಗ್ಗೆ ಕೊಡಗು ಜನರ ಬೇಡಿಕೆಯನ್ನು ಅನೇಕ ರಿಟ್ ಅರ್ಜಿಗಳ ಮುಖಾಂತರ ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದ ಪರಿಗಣಿಸಿದ್ದು ಗೌರವಾನ್ವಿತ ಕರ್ನಾಟಕದ ಉಚ್ಚನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ 39:1993, ದಿ. 22–10–1993 ರಂದು ನೀಡಿದ ತೀರ್ಪಿನಲ್ಲಿ ಜಮ್ಮಾ ಬಾಣೆ ಜಮೀನು ಹೊಂದಿರುವವರು ಅದರ ಒಡೆಯರಾಗಲು ಸಾಧ್ಯವಿಲ್ಲವೆಂದು ತೀರ್ಪು ಬಂದಿದೆ. ಆದರೆ ತೀರ್ಪು ಇತ್ತಿದೆ.

ಅದಕ್ಕೆ ಎರಡು option ನ್ನು ಕೊಟ್ಟಿದೆ. ಇವತ್ತು ಪರಿಸ್ಥಿತಿ ಹೇಗಿದೆ ಎಂದರೆ, ಯಾವುದೇ ಬ್ಯಾಂಕಿನಲ್ಲಿ ನಮಗೆ ಸಾಲವನ್ನು ಕೊಡುತ್ತಿಲ್ಲ. ಸಿ.ಆರ್.ಸಿ. ಇವತ್ತು ಕಾಫಿಯನ್ನು ಮಾರಾಟ ಮಾಡಬೇಕಾದರೆ ಅಥವಾ ಕಾಫಿಬೋರ್ಡಿನಿಂದ ನಾವು ಯಾವುದೇ ಸವಲತ್ತನ್ನು ಪಡೆಯಬೇಕಾದರೆ ಕೇಂದ್ರ ಸರ್ಕಾರದ ಸವಲತ್ತು ಇವತ್ತು

ವಿಶೇಷ ಪ್ಯಾಕೇಜುಗಳನ್ನು ಕಾಫಿ ಬೆಳೆಗಾರರಿಗೆ ಘೋಷಣೆಯನ್ನು ಮಾಡಿದೆ. ಅದಕ್ಕೆ ಎಲ್ಲಾ ಕಾಫಿ ಬೆಳೆಗಾರರು ನಾವು Coffee registation certificate ಅನ್ನು ಎಲ್ಲಾ ಬ್ಯಾಂಕಿಗೆ ಕೊಡಬೇಕಾಗಿದೆ. ಅವೆಲ್ಲವನ್ನೂ ಇವರು ತಡೆಹಿಡಿದಿದ್ದಾರೆ. ಕೊಡಗಿನ ಜನತೆಗೆ ಯಾವುದೇ ಸೌಲಭ್ಯಗಳನ್ನು ಇವತ್ತು ಸಿಗುತ್ತಿಲ್ಲ. ಈ ಒಂದು ಆದೇಶದಿಂದಾಗಿ ಇವತ್ತು ಎಲ್ಲಾ ಬ್ಯಾಂಕುಗಳಲ್ಲಿ ಸಾಲ ಕೊಡುವುದನ್ನು ನಿಲ್ಲಿಸಿದ್ದಾರೆ. ಹಾಗಾದರೆ ರೈತರ ಬದುಕುವುದು ಹೇಗೆ? ಈ ಆದೇಶವನ್ನು ಸಂಪೂರ್ಣವಾಗಿ ವಾಪಸ್ಸು ಪಡೆಯಬೇಕು. ಈ ಬಗ್ಗೆ ಮೇಲಾಧಿಕಾರಿಗಳಿಗೆ ಸೂಚನೆಯನ್ನು ಕೊಡಬೇಕು. ದಿನಾಂಕ 18–12–1996 ರ ಸರ್ಕಾರಿ ಆದೇಶದಂತೆ ಈ ಹಿಂದೆ ಕಂದಾಯಕ್ಕೆ ಒಳಪಡಿಸಿ ಅಸೆಸ್‌ಮೆಂಟ್‌ನ್ನು ಕೊಡಿಸಿ ಸಿಆರ್‌ಎಸ್ ಕೊಟ್ಟು ಎಲ್ಲವನ್ನೂ ಮಾಡುತ್ತಿದ್ದರು. ನಾನು ಮರದ ಹಕ್ಕನ್ನು ಈಗ ಕೇಳುತ್ತಿಲ್ಲ. ಅದಕ್ಕೆ Karnataka Preservation of Trees Act ಇದೆ. ಅದರ ಪ್ರಕಾರ ಮಾಡಲಿ, ಈ ಸುತ್ತೋಲೆಯನ್ನು ವಾಪಸ್ಸು ಪಡೆಯಲೇಬೇಕಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :– ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಮಾನ್ಯ ಸದಸ್ಯರುಗಳಾದ ಶ್ರೀ ಕೆ.ಜಿ. ಬೋಪಯ್ಯ ಹಾಗೂ ಶ್ರೀ ಹೆಚ್.ಡಿ. ಬಸವರಾಜು, ಶ್ರೀ ಬಿ.ಎ. ಜೀವಿಜಯರವರು ನಿಯಮ 69 ರ ಅಡಿಯಲ್ಲಿ ಈ ವಿಚಾರವನ್ನು ತಂದಿದ್ದಾರೆ, ಇವತ್ತು ಏನು ಕೊಡಗು ಜಿಲ್ಲೆಯಲ್ಲಿ ಜಮ್ಮಾ, ಬಾಣೆ ಮತ್ತು ಮಲೈ ಜಾಗೀರ್ ಬಾಣೆ ಉಂಬಳಿ ಬಾಣೆ ಈ ರೀತಿಯಾಗಿ ಸಂಪ್ರದಾಯಕವಾಗಿ ಭೂ ಹಿಡುವಳಿ ಪದ್ಧತಿ ಇದೆ, ಇದರ ಬಗ್ಗೆ ಹೈಕೋರ್ಟ್‌ನವರೆಗೂ ಹೋಗಿ ಕೆಲವೊಂದು ತೀರ್ಪುಗಳು ಸಹ ಆಗಿವೆ. ಈ ಬಗ್ಗೆ ನಾನು ಬೋಪಯ್ಯನವರನ್ನು ಇನ್ನಿತರ ಪ್ರತಿನಿಧಿಗಳನ್ನು ಕರದು 2–3 ಸಲ ಸಭೆಯನ್ನು ಸಹ ಮಾಡಿದ್ದೇನೆ. ಈ ಸಮಸ್ಯೆ ಬಹಳ ಸೂಕ್ಷ್ಮವಾದ ಸಮಸ್ಯೆ. ಇದರ ಬಗ್ಗೆ ರಾಜಕೀಯ ಇಚ್ಛಾಶಕ್ತಿಯನ್ನು ತೋರಿಸಿ ಇದಕ್ಕೊಂದು ಪರಿಹಾರವನ್ನು ಹುಡುಕಬೇಕಾಗಿದೆ. ಅದಕ್ಕಾಗಿ ನಾನು ಈವರೆಗೂ ಮಾನ್ಯ ಶಾಸಕರಲ್ಲಿ ಕೇಳಿಕೊಂಡಿದ್ದೇನೆ.

ಈ ಬಗ್ಗೆ ಮತ್ತೊಂದು ಸಲ ಅಧಿಕೃತವಾದ ಸಭೆಯನ್ನು ಮಾಡಿ, ಮಾನ್ಯ ಎಂ.ಪಿ. ಪ್ರಕಾಶ್‌ರವರು ಹಿಂದೆ ಕಂದಾಯ ಮಂತ್ರಿಗಳಾದಾಗ ಈ ಒಂದು ವಿಷಯದ ಬಗ್ಗೆ ಹಿಂದೆ ಒಂದು ಸಲ ಚರ್ಚೆಯಾಗಿದೆ. ಈ ಬಗ್ಗೆ ಮಾನ್ಯ ಎಂ.ಪಿ. ಪ್ರಕಾಶ್‌ರವರು ಸಹ ಹೇಳಿದ್ದಾರೆ. ನಾವೂ ಕೂಡ ಶಾಸಕರುಗಳಿಗೆ ಹೇಳಿದ್ದೇವೆ. ಅದರ ಬಗ್ಗೆ ಎಲ್ಲಾ ಪ್ರಮುಖರನ್ನು ಕರೆದು ಅಧಿಕಾರಿಗಳ ಜೊತೆ ಸಮಾಲೋಚನೆಯನ್ನು ಮಾಡಿ ಕೊಡಗು

ಜಿಲ್ಲೆಗೆ ಸಂಬಂಧಪಟ್ಟಂತೆ ಏನು ಸಮಸ್ಯೆ ಉಲ್ಬಣವಾಗಿದೆ, ಇದೇ ವಾರದಲ್ಲಿ ನಾನು ಒಂದು ಸಭೆಯನ್ನು ಮಾಡಿ ಪರಿಹಾರವನ್ನು ಹುಡುಕುವ ಪ್ರಯತ್ನವನ್ನು ನಾನು ಮಾಡುತ್ತೇನೆ. ಅದಕ್ಕಾಗಿ ಮಾನ್ಯ ಸದಸ್ಯರಾದ ಶ್ರೀ ಕೆ.ಜಿ. ಬೋಪಯ್ಯನವರು ಏನು ಸಮಸ್ಯೆಯನ್ನು ಎತ್ತಿದ್ದಾರೆ, ಇವತ್ತು ಅಲ್ಲಿ ತೊಂದರೆಯಾಗಿದ್ದು ಅದು ನಮ್ಮ ಗಮನಕ್ಕೂ ಕೂಡ ಬಂದಿದೆ. ಅಲ್ಲಿ ಆ ರೀತಿಯಾಗಿ ತೊಂದರೆಯಾಗದ ರೀತಿಯಲ್ಲಿ ಕೊಡಗು ಜನರ ಏನು ಹಿತಾಸಕ್ತಿಗಳು ಇವೆ, ಅದನ್ನು ರಕ್ಷಣೆ ಮಾಡುವ ರೀತಿಯಲ್ಲಿ ನಾವೆಲ್ಲಾ ಕ್ರಮವನ್ನು ಕೈಗೊಳ್ಳುತ್ತೇವೆ. ಇದೇ ವಾರದಲ್ಲಿ ಒಂದು ಸಭೆಯನ್ನು ಮಾಡಿ ಇದಕ್ಕೆ ಒಂದು ಪರಿಹಾರವನ್ನು ಹುಡುಕುವ ದಿಕ್ಕಿನಲ್ಲಿ ಪ್ರಯತ್ನವನ್ನು ನಾನು ಮಾಡುತ್ತೇನೆ.

(ಗೊಂದಲ)

ಅಧ್ಯಕ್ಷರು :- ಮಾನ್ಯ ಮಾಧುಸ್ವಾಮಿಯವರೆ ತಾವು ಮಾತನಾಡಿ.

(ಗೊಂದಲ)

ಅಧ್ಯಕ್ಷರು :- ಎಲ್ಲರಿಗೂ ಮಾತನಾಡಲು ಅವಕಾಶವನ್ನು ಮಾಡಿಕೊಡುತ್ತೇನೆ. ದಯವಿಟ್ಟು ಕುಳಿತುಕೊಳ್ಳಿ. ನಿಮಯ 69 ರ ಅಡಿಯಲ್ಲಿ ಮಾತನಾಡಲು ಮಾನ್ಯ ಮಾಧುಸ್ವಾಮಿಯವರನ್ನು ನಾನು ಈಗಾಗಲೇ ಕರೆದಿದ್ದೇನೆ.

11. ನಿಯಮ 69 ರ ಮೇರೆಗೆ ಚರ್ಚೆ :

ವಿಷಯ :- ಇಸ್ಕಾನ್‌ನಲ್ಲಿ ನಡೆದಿರುವ ಅವ್ಯವಹಾರದ ಬಗ್ಗೆ :

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) :- ಮಾನ್ಯ ಅಧ್ಯಕ್ಷರೆ, ಆಕಸ್ಮಾತ್ ಆಗಿ ಬೆಳಿಗ್ಗೆ ಅಡ್ಜರ್‌ಮೆಂಟ್ ಮೋಷನ್‌ನ್ನು ಮೂವ್ ಮಾಡಿ ಅದು ವಾಪಾಸ್ ಹೋದರೆ ನಾನು ಎಲ್ಲಿ ಶಾಮೀಲಾಗಿದ್ದೇನೆಂದು ಜನರು ತಿಳಿದುಕೊಳ್ಳುತ್ತಾರೆಂದು ಹೇಳಿ, ಇನ್ಯಾರಾದರೋ ಶಾಮೀಲಾಗಿದ್ದರೆ ಅದು ಅವರ ಹಣೆಬರಹ ಎಂದು ಗೊತ್ತಾಗಲಿ ಎಂದು ಒಳಗೆ ಬಂದಿದ್ದೇನೆ. ಇದನ್ನು ನಾನು ತಮಗೆ ಸ್ಪಷ್ಟಪಡಿಸುತ್ತಿದ್ದೇನೆ. ರೈಸ್ ಮಾಡಿದ ಹಾಗೆ ಮಾಡಿ ನಾವು ಆಚೆಗೆ ಹೋದರೆ ಏನೋ ನಾವೆಲ್ಲರೂ ಶಾಮೀಲಾಗಿ ಇಷ್ಟೆಲ್ಲಾ ಮಾತನಾಡಿದವರು, ವಾಪಸ್ಸು ಹೋದರು ಎಂದು ಅನಿಸಿಕೊಳ್ಳಬಾರದು ಎಂದು ಒಂದೇ ಒಂದು ಗೌರವಕ್ಕೆ ಈ ಸಭೆಗೆ ಬಂದು ಮಾತನಾಡುತ್ತಿದ್ದೇನೆ. ಅದು ತಮಗೆ ಅರಿವಾದರೆ ನಮ್ಮ ಪುಣ್ಯವೆಂದು ತಿಳಿದುಕೊಳ್ಳುತ್ತೇನೆ.